**1 ನೇ ಅಪರ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**
ದಿಃ 14-02-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ವಕೀಲರವರಿಂದಃ

ನಾನು 9 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ತಂದೆಯ ಹೆಸರು ಪುಟ್ಟಸ್ವಾಮಿ. ನನ್ನ ತಂದೆಯೊಂದಿಗೆ ಒಡಹುಟ್ಟಿದವರು 3 ಜನ . ನನ್ನ ತಂದೆ ಪುಟ್ಟಸ್ವಾಮಿ , ಸಿದ್ದೇಗೌಡ ಮತ್ತು ಬೋರೇಗೌಡ . ಬೋರೆಗೌಡ ಎಂಬುವವರು ವಾದಿಯ ಗಂಡ ಎಂದರೆ ಸರಿ. ದಾವಾ ಸ್ವತ್ತು ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ . ನನ್ನ ತಂದೆ ಮತ್ತು ವಾದಿಯ ಗಂಡ ಹಾಗೂ ನನ್ನ ದೊಡ್ಡಪ್ಪ ಸಿದ್ದೇಗೌಡರವರು ಮೌಖಿಕವಾಗಿ 1994 ರಲ್ಲಿ ಕುಟುಂಬದ ಸ್ವತ್ತು ಗಳನ್ನು ಕುಟುಂಬದ ಸದಸ್ಯರ ಸಲಹೆ ಮೇರೆಗೆ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಮೌಖಿಕ ವಿಭಾಗದಂತೆ ನಮ್ಮ ಮತ್ತು ನಮ್ಮ ದೊಡ್ಡಪ್ಪಂದಿರ ಭಾಗಕ್ಕೆ ಬಂದ ಸ್ವತ್ತುಗಳಲ್ಲಿ ಪ್ರತ್ಯೇಕ ಸ್ವಾಧೀನಾನುಭವ ಹೊಂದಿದ್ದೇವೆ ಎಂದರೆ ಸರಿ. ನಮ್ಮ ಅಜ್ಞಾನದಿಂದ ಸದರಿ ಮೌಖಿಕ ವಿಭಾಗವನ್ನು ವಿಭಾಗ ಪತ್ರ ಮಾಡಿಕೊಂಡು ನೊಂದಣಿ ಮಾಡಿಸಿಕೊಂಡಿಲ್ಲ ಎಂದರೆ ವಿಭಾಗವಾಗಿಲ್ಲ ಎನ್ನುತ್ತಾರೆ. ಸದರಿ 12 ಗುಂಟೆ ಜಮೀನಿನಲ್ಲಿ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪಂದಿರಿಗೆ ತಲಾ 4 ಗುಂಟೆಯಂತೆ ವಿಭಾಗ ಆಗಿತ್ತು ಎಂದರೆ ಸರಿ. ಸದರಿ 4 ಗುಂಟೆ ಜಮೀನನ್ನು ದಾಖಲೆ ಸಮೇತ ನಮ್ಮಗಳ ಹೆಸರಿಗೆ ನೊಂದಾಯಿಸಿಕೊಂಡಿಲ್ಲ ಎಂದರೆ ಸರಿ. ಆದರೆ ಮೌಖಿಕ ವಿಭಾಗದಂತೆ ಖಾತೆಗಳು ಬದಲಾಗಿದೆ ಎಂದರೆ ಸರಿ. ನನ್ನ ತಂದೆ ಮತ್ತು ದೊಡ್ಡಪ್ಪಂದಿರು ವಿಭಾಗ ವಾಗುವ ಪೂರ್ವದಲ್ಲಿ ಮೂಲ 12 ಗುಂಟೆ ಜಮೀನು ನನ್ನ ಅಜ್ಜಿಯಾದ ದೊಡ್ಡತಿಮ್ಮಮ್ಮ ಕೋಂ ಸಿದ್ದೇಗೌಡರ ಹೆಸರಿನಲ್ಲಿತ್ತು ಎಂದರೆ ಸರಿ. ನನ್ನ ಅಜ್ಜಿ ಕೂಡಾ ನನ್ನ ಅಪ್ಪ ಮತ್ತು ನನ್ನ ದೊಡ್ಡಪ್ಪಂದಿರ ಹೆಸರಿಗೆ ಖಾತೆ ಮಾಡಲು ಮೌಖಿಕವಾಗಿ ಸಮ್ಮತಿ

ನೀಡಿದ್ದರು ಎಂದರೆ ಸರಿ. ಆದಾಗೂ ನನ್ನ ತಂದೆ ಹೆಸರಿಗೆ ಸರಿಯಾಗಿ ಕಂದಾಯ ದಾಖಲೆಗಳು ಬಂದಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ದರದು ನಿಮಿತ್ತ ದಿನಾಂಕ 01-10-2000 ರಲ್ಲಿ ವಾದಿಯವರಿಗೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ತಂದೆ ಮತ್ತು ನನ್ನ ತಾಯಿ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಅದೇ ದಿನ ಕ್ರಯದ ಕರಾರಿನಂತೆ ಸ್ವಾಧೀನಾನುಭವವನ್ನು ಕೂಡಾ ವಾದಿಗೆ ನೀಡಿದ್ದೇವು ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ದೊಡ್ಡಪ್ಪ ಬೋರೇಗೌಡರ ಆಸ್ತಿಯ ಉತ್ತರಕ್ಕೆ ಇದೆ. ಸದರಿ ಸ್ವತ್ತನ್ನು ಬೇರೆಯವರು ಖರೀದಿಸಲು ಸಾಧ್ಯವಿಲ್ಲವೆಂದು ತಾವೇ ಖರೀದಿಸಬೇಕೆಂದು ವಾದಿಯ ಗಂಡನಿಗೆ ನನ್ನ ತಂದೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಅಂದಿನಿಂದ ನನ್ನ ದೊಡ್ಡಪ್ಪ ಮತ್ತು ಆತನ ಮರಣಾನಂತರ ವಾದಿ ದಾವಾ ಸ್ವತ್ತಿನ ಸ್ವಾಧೀನಾನುಭವ ಹೊಂದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಸ್ವಾಧೀನದಲ್ಲಿ ಇದ್ದೇವೆ ಎನ್ನುತ್ತಾರೆ. ನಿಪಿ 2 ರಲ್ಲಿ ನನ್ನ ತಂದೆ ಮತ್ತು ತಾಯಿ ಹೆಬ್ಬಿಟ್ಟಿನ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಸಹಿಯು ನನ್ನ ತಂದೆ ತಾಯಿಯದ್ದು ಎಂದು ಗೊತ್ತಿದ್ದರೂ ದಾವಾ ಸ್ವತ್ತನ್ನು ಕಬಳಿಸಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗಾಗಿ ಸಮಯಕೋರಿದ್ದು ಈಗಾಗಲೇ ಸಾಕಷ್ಟು ಅವಕಾಶ ನೀಡಿ ಪಾಟೀಸವಾಲು ಇಲ್ಲ ಎಂದು ತೆಗೆದುಕೊಂಡ ನಂತರ ದಿನಾಂಕ 07-8-2024 ರಂದು ಸಾಕ್ಷಿಯನ್ನು ಪುನಃ ಕರೆಯಲು ಅರ್ಜಿ ಸಲ್ಲಿಸಿ ಸದರಿ ಪುರಸ್ಕರಿಸಿದ್ದು ಅಲ್ಲಿಂದ ಇದುವರೆಗೂ ಸಾಕಷ್ಟು ಸಮಯಾವಕಾಶ ಪಡೆದು ನಂತರವೂ ದಾಖಲಾತಿ ಇಲ್ಲ ಎಂದು ಸಮಯಾವಕಾಶ ಕೋರಿರುವುದು ಮೇಲ್ನೋಟದಲ್ಲಿಯೇ ನಿರ್ಲಕ್ಷತೆ ತೋರಿಸುತ್ತಿದ್ದು ಆದ್ದರಿಂದ**

**ತಿರಸ್ಕರಿಸಲಾಗಿದೆ ಮತ್ತು ಮುಂದುವರೆದ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ** .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
1 ನೇ ಅಪರ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು